# ಪ್ಯಾಲೆಸ್ಟೀನ್ ಕವಿತೆಗಳು



## ಕನ್ನಡಕ್ಕೆ: ವಿಶಾಲ್ ಮ್ಯಾಸರ್

ಕಲೆ: ರೂಪಶ್ರೀ ಕಲ್ಲಿಗನೂರು



## ತಿಂಗಳುಗಳೇ ಕಳೆದಿವೆ

### ಸ್ಟೆಲ್ಲಾ ಎವಾಂಜೇಲಿದು

ಹಸಿವಿನಿಂದ ಅವರನ್ನು ಕೊಲ್ಲುತ್ತಿದ್ದಾರೆ
ತಿಂಗಳುಗಳೇ ಕಳೆದಿವೆ

ಅವರನ್ನು
ಪ್ರತಿಯೊಂದು ಹತ್ಯಾರ ಬಳಸಿ
ಪ್ರತಿದಿನವೂ ಹಲವು ವಿಧಗಳಲ್ಲಿ ಕೊಲ್ಲುತ್ತಿದ್ದಾರೆ
ಈಗ ವರ್ಷಗಳು ಕಳೆದಿವೆ

ಅನ್ನವಿಲ್ಲ;
ನೀನು ನೋಡು
ನೀನಿನ್ನು ಸಾಯುತ್ತೀಯ

ಮಕ್ಕಳು
ಅಪ್ಪ ಅಮ್ಮನ ಕಣ್ಣಮುಂದೆ ಸಾಯುತ್ತಿದ್ದಾರೆ
ಅನ್ನಕ್ಕಾಗಿ ಕೈ ಚಾಚಿದರೂ;
ನೀನಿನ್ನು ಸಾಯುತ್ತೀಯ

ಅವರ ಮಕ್ಕಳ ಕಣ್ಣುಗಳಲ್ಲಿ:
ನೀನೊಮ್ಮೆ ಇಣುಕು
ತಂದೆತಾಯಿಗಳು ಕುಸಿಯುತ್ತಿದ್ದಾರೆ

ನಿನ್ನ ಸಾವು ಎಚ್ಚರದಿಂದ ಹೆಣೆದಾಗ
ನಿನಗೆ ಬೇರೆ ಆಯ್ಕೆಯಿಲ್ಲ

ಮರುಭೂಮಿಯ ಹೂವೆ,
ಇಲ್ಲಿ ನೆಲ ಬತ್ತಿದೆ
ಯಾವ ವಿಧಿ
ನಿನಗೆ ಇಂಥ ಜಾಗದಲ್ಲಿ
ಬದುಕ ಭರವಸೆ ಕರುಣಿಸಿದೆ?

ಮರುಭೂಮಿಯ ಹೂವೆ,
ನೀನು ಉಸುಕಿನಲ್ಲಿ ಅರಳಿದ
ಅನಂತ ಸ್ವರ್ಗದ ಕಿರುನೋಟ
ಯಾವ ದಯೆಯಿಲ್ಲದ ಕಯ್ಯಿ?
ಯಾವ ರಕ್ತರೇಖೆಯ ಮುಷ್ಟಿ?
ಯಾರು ತೀರ್ಮಾನಿಸಿದರು
ನಿನ್ನ, ನಿನ್ನ ನೆಲವನ್ನ ಹರಿದು ಹಂಚಬೇಕೆಂದು?
ಜೀವಂತ ನರಕವಾಗಿಸಬೇಕೆಂದು?

ಮರುಭೂಮಿಯ ಹೂವೆ
ನೀನು ಸತ್ತರೆ
ಅದು ಬರಿಯ ನಿನ್ನದಲ್ಲ
ನಿನ್ನ ಸಾವು ಇಡೀ ಭೂಮಿಯ ಸಾವಾಗಿರುತ್ತದೆ